## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ, ಶ್ರೀಮತಿ ಉಮಾಶ್ರೀ ಹಾಗೂ ಇತರರು 330 ರ ನಿಯಮದ ಮೇರೆಗೆ ಸಲ್ಲಿಸಿರುವ ಸೂಚನೆಗೆ ಉತ್ತರ.

### ಸೂಚನೆ:

"2021-22 ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆದಿರುವುದು ಗಮನಕ್ಕೆ ಬಂದಿದ್ದು, ಈ ಅವ್ಯವಹಾರದಲ್ಲಿ ಸರ್ಕಾರದ ಆರ್ಥಿಕ ಇಲಾಖೆ ಮತ್ತು ನಿಗಮದ ಉನ್ನತ ಅಧಿಕಾರಿಗಳು ಬಾಗಿಯಾಗಿದ್ದು, ಸರ್ಕಾರ ನಿಗದಿಪಡಿಸಿದ ಸಾಂಸ್ಥಿಕ ಕೋಟವನ್ನು ಅಂದಿನ ಸಚಿವರುಗಳೇ ಉಲ್ಲಂಘನೆ ಮಾಡಿ ಸುಮಾರು ರೂ.60.00 ಕೋಟಿ ಅವ್ಯವಹಾರ ಆಗಿರುವ ಬಗ್ಗೆ, ಪರಿಶಿಷ್ಟ ಜಾತಿ ಭೋವಿ ಜನಾಂಗಗಳ ಸಮಗ್ರ ಅಭಿವೃದ್ಧಿಯ ಚಿಂತನೆಗೆ ವಿರುದ್ಧವಾಗಿ ಕಾರ್ಯನಿರ್ವಹಣೆ ಮಾಡಿದ್ದು, ಇಲಾಖೆಯ ಅಧಿಕಾರಿಗಳು ಕೋವಿಡ್ ನೆಪದಲ್ಲಿಯೂ ಕೋಟ್ಯಾಂತರ ರೂಪಾಯಿ ಅನುದಾನ ಸಹ ದುರುಪಯೋಗ ಮಾಡಿಕೊಂಡಿದ್ದು, ಈ ಬಗ್ಗೆ ವಿಷಯ ಪ್ರಸ್ತಾಪಿಸ ಬಯಸುತ್ತೇವೆ."

### ಉತ್ತರ:

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ ಕೋಟ್ಯಾಂತರ ರೂಪಾಯಿ ಹಗರಣ ನಡೆದಿದೆ ಎಂಬ ದೂರಿನ ಮೇರೆಗೆ ಶ್ರೀ ವೆಂಕಟೇಶ್ ಮೌರ್ಯ.ಪಿ. ಇವರ ಪತ್ರ ಸಂಖ್ಯೆ:101029/21 ದಿನಾಂಕ:25-08-2021 ಮತ್ತು ಶ್ರೀ ಎನ್.ನಾರಾಯಣಸ್ವಾಮಿ ಬಿನ್ ನಾರೆಪ್ಪ ಇವರ ದೂರು ಅರ್ಜಿ ದಿನಾಂಕ:19-08-2021 ರಂದು ಸರ್ಕಾರಕ್ಕೆ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಸಲ್ಲಿಸಿರುವ ದೂರಿನ ಪ್ರಕಾರ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರ ಕಛೇರಿಯ ಅಧಿಕೃತ ಜ್ಞಾಪನ ದಿನಾಂಕ:25-08-2021 ರಂತೆ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ಕೇಂದ್ರ ಕಛೇರಿಗೆ ದಿನಾಂಕ:26-08-2021 ಮತ್ತು 04-09-2021 ರಂದು ಅಧಿಕಾರಿಗಳ ತನಿಖಾ ತಂಡವು ಭೇಟಿ ನೀಡಿ, ದಿನಾಂಕ:07-09-2021 ರಂದು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿತ್ತು. ಸದರಿ ತನಿಖಾ ವರದಿಯಲ್ಲಿ ಮೇಲ್ನೋಟಕ್ಕೆ ಹಲವು ನ್ಯೂನ್ಯತೆಗಳು ಕಂಡು ಬಂದಿರುತ್ತದೆ. ಈ ಮಧ್ಯೆ ಭೋವಿ ಅಭಿವೃದ್ಧಿ ನಿಗಮದಲ್ಲಿ ಫಲಾನುಭವಿಗಳಿಗೆ ನೀಡಿರುವ ಸೌಲಭ್ಯಗಳು ನೀಡುವಲ್ಲಿ ಭ್ರಷ್ಟಾಚಾರವಾಗಿರುವುದು ಮಾಧ್ಯಮಗಳಲ್ಲಿ ಸಹ ಬಿತ್ತರವಾಗಿರುತ್ತದೆ.

ಮೇಲಿನ ಕಾರಣಗಳಿಂದ ಸರ್ಕಾರದ ಆದೇಶ ಸಂಖ್ಯೆ: ಸಕಇ 249 ಪಕಸೇ 2021 ದಿನಾಂಕ:27-12-2021 ರಂದು ಹಿಂದಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಲೀಲಾವತಿ ಮತ್ತು ಹಿಂದಿನ ಪ್ರಧಾನ ವ್ಯವಸ್ಥಾಪಕರಾದ ಡಾ||ಬಿ.ಕೆ ನಾಗರಾಜಪ್ಪ ಹಾಗೂ ಹಿಂದಿನ ಕಛೇರಿ ಅಧೀಕ್ಷಕರಾದ ಶ್ರೀ ಪಿ.ಡಿ. ಸುಬ್ಬಪ್ಪ ರವರನ್ನು ಅಮಾನತ್ತುಗೊಳಿಸಲಾಗಿತ್ತು. ಆದರೆ ಹಿಂದಿನ ವ್ಯವಸ್ಥಾಪಕ ನಿರ್ದೇಶಕರು ಮತ್ತು ಪ್ರಧಾನ ವ್ಯವಸ್ಥಾಪಕರು ಮಾನ್ಯ ಕರ್ನಾಟಕ ಆಡಳಿತ ನ್ಯಾಯಾ ಮಂಡಳಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ತಡೆಯಾಜ್ಞೆ ನೀಡಿರುತ್ತದೆ.

---2

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಸಲುಇ 2022, ದಿನಾಂಕ:04-04-2022 ರಂದು ಶ್ರೀಮತಿ ಆರ್.ಲೀಲಾವತಿ, ಹಿಂದಿನ ವ್ಯವಸ್ಥಾಪಕ ನಿರ್ದೇಶಕರು, ನಿವೃತ್ತ ಸರ್ಕಾರದ ವಿಶೇಷ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಸಚಿವಾಲಯ ರವರ ವಿರುದ್ಧ ಆರೋಪಗಳ ಕುರಿತು ತನಿಖೆ ನಡೆಸಲು ಪ್ರಕರಣವನ್ನು ಭ್ರಷ್ಟಾಚಾರ ನಿಗ್ರಹ ದಳಕ್ಕೆ ವಹಿಸಿಕೊಡಲಾಗಿರುತ್ತದೆ. ಭ್ರಷ್ಟಾಚಾರ ನಿಗ್ರಹ ದಳದವರು ದಿನಾಂಕ: 28-04-2022 ರಂದು ಶೋಧನಾ ಕಾರ್ಯ ನಡೆಸಿದ ನಂತರ ಆರೋಪಿತ ಅಧಿಕಾರಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. ನಂತರ ವ್ಯವಸ್ಥಾಪಕ ನಿರ್ದೇಶಕರಾಗಿ ಶ್ರೀ ಯೋಗೇಶ್ ರವರನ್ನು ನೇಮಕ ಮಾಡಲಾಗಿರುತ್ತದೆ. ಮುಂದುವರೆದು ಭೋವಿ ಅಭಿವೃದ್ಧಿ ನಿಗಮದ ಕಛೇರಿಯನ್ನು ಸರ್ಕಾರದ ಆದೇಶ ದಿನಾಂಕ:22-06-2022 ರಂದು ಆಡಳಿತಾತ್ಮಕ ಹಿತದೃಷ್ಟಿಯಿಂದ ಭೋವಿಪಾಳ್ಯ ಮಹಾಲಕ್ಷ್ಮೀಪುರಂ ಇಲ್ಲಿಂದ 20ನೇ ಮಹಡಿ ವಿಶ್ವೇಶ್ವರಯ್ಯ ದೊಡ್ಡ ಗೋಪುರಕ್ಕೆ ಸ್ಥಳಾಂತರ ಮಾಡಲಾಗಿರುತ್ತದೆ.

ಭ್ರಷ್ಟಾಚಾರ ನಿಗ್ರಹ ದಳವು ದಿನಾಂಕ:06-05-2022 ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿ, ತನಿಖಾ ವರದಿಯಲ್ಲಿ ಸರ್ಕಾರದಿಂದ ಹಂಚಿಕೆಯಾದ ಅನುದಾನವನ್ನು ತಮಗೆ ಇಷ್ಟ ಬಂದ ಹಾಗೆ ಯೋಜನೆಗಳಿಗೆ ಮರು ಹಂಚಿಕೆ ಮಾಡಿ, ಅಧಿಕಾರ ದುರುಪಯೋಗಪಡಿಸಿಕೊಂಡು ಅಕ್ರಮವೆಸಗಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆಸಿ ಸರ್ಕಾರಕ್ಕೆ ಮತ್ತು ನಿಗಮಕ್ಕೆ ನಷ್ಟ ಉಂಟು ಮಾಡಿದ್ದು, ಇದರಿಂದ ಅಸಲಿ ನಿಜವಾದ ಫಲಾನುಭವಿಗಳು ವಂಚಿತರಾಗಿರುತ್ತಾರೆ ಎಂದು ತಿಳಿಸಿರುತ್ತಾರೆ.

ತಮ್ಮ ಅವಧಿಯಲ್ಲಿ ಹಿಂದಿನ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ಇವರ ನಿಯಮಬಾಹಿರವಾದ ಆದೇಶದ ಮೇರೆಗೆ ಶ್ರೀ ಕೆ.ಎಸ್.ನಾಗಮೂರ್ತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯಿತ್ ರಾಜ್ ಇಲಾಖೆ, ಉಪ ವಿಭಾಗ, ಕಲಬುರಗಿ ಜಿಲ್ಲೆ ಇವರನ್ನು ಕಲಬುರಗಿ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರಾಗಿ ಮತ್ತು ಶ್ರೀ ಶಂಕರ ಜು. ದೇವರಮನಿ, ಸರ್ಕಾರಿ ಪ್ರೌಢಶಾಲೆ ಶಿಕ್ಷಕರು, ಮಿಣಜಗಿ ಇವರನ್ನು ಅನ್ಯ ಕರ್ತವ್ಯದ ಮೇಲೆ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ ವಿಜಯಪುರ ಜಿಲ್ಲಾ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಲು ನಿಗಮದಿಂದ ಆದೇಶ ಹೊರಡಿಸಿರುತ್ತಾರೆ.

ಕೇಂದ್ರ ಕಛೇರಿಯಿಂದ ಉದ್ಯಮಶೀಲತಾ ಯೋಜನೆಯಡಿ ಸಾಂಸ್ಥಿಕ ಕೋಟಾದಡಿ ನಿಯಮಬಾಹಿರವಾಗಿ ಕಲಬುರಗಿಯಲ್ಲಿ ಸುಮಾರು ರೂ.11.80 ಕೋಟಿ ಹಾಗೂ ವಿಜಯಪುರ ಜಿಲ್ಲೆಯಲ್ಲಿ ರೂ.5.30 ಕೋಟಿ ಒಟ್ಟು ರೂ.12.10 ಕೋಟಿ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ಕಲಬುರಗಿ ಜಿಲ್ಲೆ ಕಾಳಗಿ ಪೊಲೀಸ್ ಠಾಣೆಯಲ್ಲಿ ಮೊ.ಸಂ:79/2022 ಪ್ರಕರಣ ದಾಖಲಾಗಿರುತ್ತದೆ. ಈ ಪ್ರಕರಣವನ್ನು CID ಗೆ ವರ್ಗಾಯಿಸಲಾಗಿರುತ್ತದೆ.

ಇದಲ್ಲದೆ ಬೆಂಗಳೂರು ನಗರ ಜಿಲ್ಲೆಯ ಸಿದ್ದಾಪುರ ಪೊಲೀಸ್ ಠಾಣಾ ಪ್ರಕರಣ ಸಂಖ್ಯೆ:56/2023 ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ಮೊ.ಸಂ:7/2023 ರಲ್ಲಿ ಫಲಾನುಭವಿಗಳನ್ನು ವಂಚಿಸಿ ಹಣ ದುರುಪಯೋಗ

ಪಡಿಸಿಕೊಂಡಿರುವ ಬಗ್ಗೆ ಪ್ರಕರಣ ದಾಖಲಾಗಿರುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಛೇರಿಯಿಂದ ರೂ.10.95 ಕೋಟಿಗಳನ್ನು ಬಿಡುಗಡೆ ಮಾಡಿರುವ ಬಗ್ಗೆ ಮಾಹಿತಿ ಬಂದಿದ್ದು, ಅದೇ ರೀತಿ ಬೆಂಗಳೂರು ನಗರ ಜಿಲ್ಲಾ ಕಛೇರಿಯಿಂದ ರೂ.17.13 ಕೋಟಿಗಳನ್ನು ಬಿಡುಗಡೆ ಮಾಡಿರುವ ಬಗ್ಗೆ ಮಾಹಿತಿ ಸ್ವೀಕೃತವಾಗಿದ್ದು, ಈ ಮೊತ್ತದ ವಿತರಣೆಯ ಬಗ್ಗೆ ಕಡತಗಳಾಗಲೀ ಅಥವಾ ಫಲಾನುಭವಿಗಳ ಪಟ್ಟಿ/ಇನ್ನಿತರೆ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲ.

ನಿಗಮದ ಕೇಂದ್ರ ಕಛೇರಿಯಲ್ಲಿ ಕೋವಿಡ್ ಹೆಸರಿನಲ್ಲಿ ಶ್ರೀ ಸಾಯಿ ಥೆರಾಪಿಕ್ಸ್ (ಇಂಡಿಯಾ) ಪ್ರೈ.ಲಿ. ಎಂಬ ಖಾಸಗಿ ಸಂಸ್ಥೆಯಿಂದ ರೂ.1.78 ಕೋಟಿಗಳ ಮೊತ್ತದ ಮಾಸ್ಕ್, ಸ್ಯಾನಿಟೈಸರ್ ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಿರುವ ಸಂಬಂಧ Invoice ಲಭ್ಯವಿರುತ್ತದೆ ಆದರೆ ಸದರಿ ವಸ್ತುಗಳನ್ನು ಖರೀದಿಸಿ ವಿತರಿಸಿರುವ ಬಗ್ಗೆ ದಾಸ್ತಾನು ಪುಸ್ತಕ ಅಥವಾ ಇತರೆ ಪೂರಕ ದಾಖಲೆಗಳು ಲಭ್ಯವಿರುವುದಿಲ್ಲ.

ಮೇ: ಅನಿಕಾ ಎಂಟರ್‌ಪ್ರೈಸಸ್ ರವರಿಗೆ ಹೊರಸಂಪನ್ಮೂಲ ಸಿಬ್ಬಂದಿಗಳ ವೇತನ ಪಾವತಿಸುವ ಸಂಬಂಧ ರೂ.1.96 ಕೋಟಿಗಳು ಪಾವತಿಯಾಗಿದ್ದು, ಈ ಪೈಕಿ ಹೆಚ್ಚಿನ ಹೊರಸಂಪನ್ಮೂಲ ನೌಕರರು ತಮಗೆ ವೇತನ ಪಾವತಿಸಿರುವುದಿಲ್ಲ ಎಂಬ ಮಾಹಿತಿ ಸಲ್ಲಿಸಿರುತ್ತಾರೆ.

ಮೆ||ಹರಿಣಿತ ಕ್ರಿಯೇಷನ್ಸ್, ರೂ.5.99 ಲಕ್ಷಗಳನ್ನು ಗಾರ್ಮೆಂಟ್ಸ್ ಸಲುವಾಗಿ ಕೇಂದ್ರ ಕಛೇರಿಯಿಂದ ಹಣ ಬಿಡುಗಡೆ ಮಾಡಿರುತ್ತಾರೆ. ಸದರಿ ಮೊತ್ತವು ಬಿಡುಗಡೆಯಾಗಿರುವ ಬಗ್ಗೆ ಬ್ಯಾಂಕ್ ಸ್ಟೇಟ್‌ಮೆಂಟ್‌ನಿಂದ ತಿಳಿದುಬಂದಿರುತ್ತದೆ. ಆದರೆ ಅದಕ್ಕೆ ಸಂಬಂಧಿಸಿದ ಯಾವುದೇ ಬಿಲ್ಲುಗಳು ಲಭ್ಯವಿರುವುದಿಲ್ಲ.

ಸಾಂಸ್ಕಿಕ ಕೋಟಾದ ಹೆಸರಿನಲ್ಲಿ ರೂ.5.00 ಲಕ್ಷ ಮತ್ತು ರೂ.10.00 ಲಕ್ಷಗಳು ಸಹಾಯಧನ ನಿಯಮಬಾಹಿರವಾಗಿ ಕೇಂದ್ರ ಕಛೇರಿಯಿಂದ ಜಿಲ್ಲಾ ಕಛೇರಿಗಳಿಗೆ ಅನುದಾನ ಬಿಡುಗಡೆ ಮಾಡಿರುವುದು ವಿಶೇಷ ಆಂತರಿಕ ಲೆಕ್ಕ ಪರಿಶೋಧನೆ ನಡೆಸಿದಾಗ ಕಂಡುಬಂದಿರುತ್ತದೆ. ನಿಗಮದಲ್ಲಿ ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ /ಸಮೃದ್ಧಿ/ಭೂ ಒಡೆತನ/ಐರಾವತ ಯೋಜನೆಗಳ ಅನುದಾನವನ್ನು ಮಾರ್ಗಪಲ್ಲಟನೆ ಮಾಡಿ ಸುಮಾರು ರೂ.88.74 ಕೋಟಿಗಳಷ್ಟು ಅವ್ಯವಹಾರ ನಡೆದಿರುತ್ತದೆ ಎಂದು ವಿಶೇಷ ಆಂತರಿಕ ಲೆಕ್ಕ ಪರಿಶೋಧನೆಯಲ್ಲಿ ವರದಿ ನೀಡಿರುತ್ತಾರೆ. ಈ ಮಾಹಿತಿಯನ್ನು CID ಗೆ ಸಲ್ಲಿಸಲಾಗಿದೆ.

ಈ ಅವಧಿಯಲ್ಲಿ ನಿಗಮದ ಆಡಳಿತ ನಿರ್ದೇಶಕ ಮಂಡಳಿ ಸಭೆಗಳು ನಡೆದಿರುವುದಿಲ್ಲ ಹಾಗೂ ಈ ಹಗರಣದಲ್ಲಿ ಹಿಂದಿನ ವ್ಯವಸ್ಥಾಪಕ ನಿರ್ದೇಶಕರು, ಹಿಂದಿನ ಪ್ರಧಾನ ವ್ಯವಸ್ಥಾಪಕರು ಮತ್ತು ಹಿಂದಿನ ಕಛೇರಿ ಅಧೀಕ್ಷಕರು ಪ್ರಮುಖ ಆರೋಪಿಗಳಾಗಿರುವುದು ಕಂಡು ಬಂದಿರುತ್ತದೆ. ಈ ಪ್ರಕರಣವನ್ನು ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 02 ಸಿಬಿಡಿ 2023, ದಿನಾಂಕ:02-12-2023 ರಂದು CID ಗೆ ತನಿಖೆ ನಡೆಸಲು ವಹಿಸಲಾಗಿರುತ್ತದೆ ಹಾಗೂ ಎಲ್ಲಾ ಆರೋಪಿತ ಅಧಿಕಾರಿ ಸಿಬ್ಬಂದಿಗಳನ್ನು ಭೋವಿ ನಿಗಮದಿಂದ ಬದಲಾಯಿಸಿರುತ್ತಾರೆ.

---4

ಒಟ್ಟಾರೆ ಈ ಹಗರಣಕ್ಕೆ ಸಂಬಂಧಿಸಿದಂತೆ ಭ್ರಷ್ಟಾಚಾರ ನಿಗ್ರಹ ದಳದ (ACB) ದಿಂದ ಲೋಕಾಯುಕ್ತಕ್ಕೆ ಹಾಗೂ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣಗಳನ್ನು CID ಗೆ ವಹಿಸಿ ಪ್ರಸ್ತುತ 11 ಅಧಿಕಾರಿಗಳ ನೇತೃತ್ವದಲ್ಲಿ ತಂಡ ರಚಿಸಿ, ತನಿಖೆ ಪ್ರಗತಿ ಹಂತದಲ್ಲಿರುತ್ತದೆ.

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳು 2021-22 ಮತ್ತು 2022-23ನೇ ಸಾಲಿನಲ್ಲಿ ಮೇಲ್ಕಂಡಂತೆ ಸಾಂಸ್ಥಿಕ ಕೋಟಾದ ಹೆಸರಿನಲ್ಲಿ ಅವ್ಯವಹಾರ ನಡೆಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಭ್ರಷ್ಟಚಾರ ನಿಗ್ರಹ ದಳದಿಂದ ಪ್ರಸ್ತುತ ಮಾನ್ಯ ಲೋಕಾಯುಕ್ತ ಸಂಸ್ಥೆಗೆ ವರ್ಗಾಯಿಸಿದ್ದು ಹಾಗೂ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ಪ್ರಕರಣಗಳನ್ನು ಸಿ.ಐ.ಡಿ. ಸಂಸ್ಥೆಯಿಂದ ತನಿಖೆ ನಡೆಸಲಾಗುತ್ತಿದ್ದು, ತನಿಖೆ ಪ್ರಗತಿ ಹಂತದಲ್ಲಿರುತ್ತದೆ.

**ಸಕಇ 234 ಎಸ್‌ಎಲ್‌ಪಿ 2024**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**